ನಿವೇದನೆ
ದಿನಾಂಕ ೨೭-೨-೨೦೨೧

ಅಧಿಸೂಚನೆ ಸಂಖ್ಯೆ ೧/೨೦೨೦ ದಿನಾಂಕ ೯-೩-೨೦೨೦ ರನ್ವಯ ಬೆರಳಚ್ಚು-ನಕಲುಗಾರ ಹುದ್ದೆಗೆ ಅರ್ಹತಾ ಪರೀಕ್ಷೆಯನ್ನು ದಿನಾಂಕ ೨೭-೨-೨೦೨೧ ಹಾಗೂ ೨೮-೨-೨೦೨೧ ರಂದು ನಿಗದಿಯಾಗಿರುತ್ತದೆ. ಸದರೀ ನಿಗದಿತ ಪರೀಕ್ಷೆಗಾಗಿ ದಿನಾಂಕ ೨೭-೨-೨೦೨೧ ರಂದು ಬಂದಿರುವ ಅಭ್ಯರ್ಥಿಗಳ ಮೂಲ ಶಾಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಅಧಿಸೂಚನೆ ಹಾಗೂ ಅರ್ಹತಾ ಪರೀಕ್ಷೆಗಾಗಿ ಹಾಜರಾಗಲು ತಿಳಿಸಿರುವ ಸೂಚನಾ ಪತ್ರದ ಅನ್ವಯ ಈ ಕೆಳಗೆ ಕಾಣಿಸಿರುವಂತೆ ಕಂಡು ಬಂದಿರುತ್ತದೆ.

| ಗ್ರಾಮೀಣ ಪ್ರಮಾಣ ಪತ್ರ ನಮೂನೆ-೧ ಮತ್ತು ೨ ಅಧಿಸೂಚನೆಯಲ್ಲಿ ತಿಳಿಸಿದಂತೆ ನಿಗದಿತ ಅವಧಿಯೊಳಗೆ ತೆಗೆದುಕೊಂಡು ಹಾಜರ ಪಡಿಸಿರುವ ಅಭ್ಯರ್ಥಿಗಳು | ಗ್ರಾಮೀಣ ಪ್ರಮಾಣ ಪತ್ರ ನಮೂನೆ-೧ ಹಾಜರ ಪಡಿಸದೇ ಇರುವ ಅಭ್ಯರ್ಥಿಗಳು | ಗ್ರಾಮೀಣ ಪ್ರಮಾಣ ಪತ್ರ ನಮೂನೆ-೧ ನ್ನು ಅಧಿಸೂಚನೆ ಕೊನೆಯ ದಿನಾಂಕದ ನಂತರ ಹಾಜರ ಪಡಿಸಿರುವ ಅಭ್ಯರ್ಥಿಗಳು (ಇತ್ತೀಚಿನ) | ಹಾಜರ ಆಗದೇ ಇರುವ ಅಭ್ಯರ್ಥಿಗಳು | ಒಟ್ಟು ಅಭ್ಯರ್ಥಿಗಳು |
|---|---|---|---|---|
| 26 | 33 | 4 | 13 | 76 |

ಕಾರಣ, ಅಭ್ಯರ್ಥಿಗಳು ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡಿರುವ ಗ್ರಾಮೀಣ ಪ್ರಮಾಣ ಪತ್ರ ನಮೂನೆ-೧ ನ್ನು ಹಾಜರ ಪಡಿಸದೇ ಇರುವ ಹಾಗೂ ಅಧಿಸೂಚನೆ ಕೊನೆಯ ದಿನಾಂಕದ ನಂತರ (ಇತ್ತೀಚಿನ) ನಮೂನೆ-೧ ನ್ನು ಹಾಜರ ಪಡಿಸಿರುವಂತಹ ಅಭ್ಯರ್ಥಿಗಳನ್ನು ಅರ್ಹತಾ ಪರೀಕ್ಷೆಗಾಗಿ ಕೂಡಿಸುವ ಸಂಬಂಧವಾಗಿ ಆದೇಶಿಸಲು ಒಪ್ಪಿಸಲಾಗಿದೆ.

ಶಿರಸ್ತೇದಾರ

ಸಿ.ಎ.ಓ. 27/2/21

## ಆದೇಶ

ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡಿರುವ ಗ್ರಾಮೀಣ ಪ್ರಮಾಣ ಪತ್ರ ನಮೂನೆ-೧ ನ್ನು ಹಾಜರ ಪಡಿಸದೇ ಇರುವ ಹಾಗೂ ಅಧಿಸೂಚನೆ ಕೊನೆಯ ದಿನಾಂಕದ ನಂತರ (ಇತ್ತೀಚಿನ) ನಮೂನೆ-೧ ನ್ನು ಹಾಜರ ಪಡಿಸಿರುವಂತಹ ಅಭ್ಯರ್ಥಿಗಳನ್ನು ಅರ್ಹತಾ ಪರೀಕ್ಷೆಗಾಗಿ ಹಾಜರ ಪಡಿಸಬಾರದೆಂದು ಆದೇಶಿಸಲಾಗಿದೆ. ಯಾವ ಅಭ್ಯರ್ಥಿಗಳು ನಮೂನೆ-೧ ಮತ್ತು ನಮೂನೆ-೨ ನ್ನು ಅಧಿಸೂಚನೆಯಲ್ಲಿ ತಿಳಿಸಿದಂತೆ ನಿಗದಿತ ಅವಧಿಯೊಳಗೆ ತೆಗೆದುಕೊಂಡು ಹಾಜರ ಪಡಿಸಿರುವಂತಹವರನ್ನು ಮಾತ್ರ ಅರ್ಹತಾ ಪರೀಕ್ಷೆಗೆ ಹಾಜರ ಪಡಿಸಲು ಆದೇಶಿಸಲಾಗಿದೆ.

27/2

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಗದಗ.